**CC. No. 1768/2022** **PW -2**

ಪ್ರಮಾಣೀಕರಿಸಲಾದ ದಿನಾಂಕಃ- **22.11.2025.**
ಮುಂದುವರೆದ ಪಾಟೀ ಸವಾಲುಃ ಆರೋಪಿ ಪರ ಶ್ರೀ. ಟಿ ಹೆಚ್ ಪಿ ವಕೀಲರಿಂದಃ-

ಬಾರ್‌ಗಳಿದ್ದ ಬಗ್ಗೆ ದಾಖಲೆ ಕೊಟ್ಟಿಲ್ಲ. ನಾನು 15 ಲಕ್ಷ ಆರೋಪಿಗೆ ಸಾಲ ನೀಡಿದ್ದು, ಆರೋಪಿ ಗೋಣಿಕೊಪ್ಪ ಬಾರ್ ಅನ್ನು ನಡೆಸಿಕೊಂಡು (Management) ಹೋಗುವುದಾಗಿ ನನಗೆ ಹೇಳಿರುತ್ತಾರೆ. 5 ವರ್ಷದ ಹಿಂದೆ ಮಾರ್ಚ್ ತಿಂಗಳಿಂದ ನವೆಂಬರ್ ತಿಂಗಳ ಒಳಗೆ ಕೊಟ್ಟಿರುತ್ತೇವೆ. ಪೂರ್ತಿ 15 ಲಕ್ಷ ಕೊಟ್ಟ ಮೇಲೆ ನಿ ಪಿ 1 ಚೆಕ್ ಕೊಟ್ಟಿರುತ್ತೇವೆ. ನನ್ನ ಗಂಡ ಮತ್ತು ನನ್ನ ಬಂಗಾರವನ್ನು ಗಿರವಿ ಇಟ್ಟು ಈ ಹಣ ಕೊಟ್ಟಿರುತ್ತೇವೆ, DCC bank Gonikoppa branch ನಲ್ಲಿ ಗಿರವಿ ಇಟ್ಟು ಕೊಟ್ಟಿರುತ್ತೇನೆ. ನನ್ನ ಗಂಡ ಗಿರವಿ ಇಟ್ಟಿದ್ದು ಎಷ್ಟು ಗ್ರಾಂಗಳು ಬಂಗಾರ ಇಟ್ಟಿರುತ್ತಾನೋ ನನಗೆ ಗೊತ್ತಿಲ್ಲ. 15 ಲಕ್ಷ ಹಣ ಪೂರ್ತಿ ನಗದು ಕೊಟ್ಟಿರುತ್ತೇನೆ. ನಿ ಪಿ 1 ಚೆಕ್ ಆರೋಪಿ ಬರೆದಿರುತ್ತಾರೆ. ಚೆಕ್ ನಲ್ಲಿ ಬರೆದಿರುವ ಹೆಸರು ಮತ್ತು ಮೊತ್ತವನ್ನು ಪದಗಳಲ್ಲಿ ಬರೆದಿರುವ ಬರವಣಿಗೆ ಬೇರೆ ಇರುತ್ತದೆ ಎಂದರೆ ಸರಿ. ಆರೋಪಿ ಒಂದೇ ಚೆಕ್ ಅನ್ನು ನನ್ನ ಗಂಡನಿಗೆ ಗೋಣಿಕೊಪ್ಪದಲ್ಲಿ ಕೊಟ್ಟಿರುತ್ತಾರೆ, ಕೊಟ್ಟಾಗ ನಾನು ಇರಲಿಲ್ಲ ಗೋಣಿಕೊಪ್ಪದಲ್ಲಿ ಎಲ್ಲೋ ಕೊಟ್ಟಿರುತ್ತಾರೆ.

30 ರಿಂದ 40 ಲಕ್ಷ ಆದಾಯಕ್ಕೆ ಆದಾಯ ತೆರಿಗೆ ಪಾವತಿಸಿಲ್ಲ. 15 ಲಕ್ಷ ಹಣ 5 – 6 ಬಾರಿ ಎಷ್ಟೆಷ್ಟು ಕೊಟ್ಟೆ ಎಂದು ನಿಖರವಾಗಿ ಹೇಳಲು ಬರುವುದಿಲ್ಲ. ಅವರ ಆಸ್ತಿಯನ್ನು ಮಾರಾಟ ಮಾಡಿ ಹಣ ಹಿಂದಿರುಗುಸುವಾಗಿ ಹೇಳಿದರು. ನನ್ನ ಗಂಡ 5 – 6 ಬಾರಿ ಹಣ ವಾಪಸ್ ಕೇಳಲು ಆರೋಪಿ ಮನೆಗೆ ಹೋಗಿರುತ್ತೇವೆ. ಆರೋಪಿ ನಮಗೆ ಹಣ ಕೊಡಲು ಯಾವುದು ಇಲ್ಲ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿ ನಮ್ಮ ಬಾರ್‌ಗಳಲ್ಲಿ Manage ಮಾಡಲು ಒಪ್ಪಿರಲಿಲ್ಲ ಎಂದರೆ ಸರಿಯಲ್ಲ, ಅಂತಹ ಬಾರ್‌ಗಳು ನಮಗೆ ಯಾವುದು ಇಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚಿಸಿದೆ)

Sd/-
ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ., ಪೊನ್ನಂಪೇಟೆ